‘ಫಟಾರ್’ ಅಂತ ಬಾರಿಸಿ ಅಬ್ಬರಿಸಿದಳು: ‘ಮೂರುಕಾಸಿನ ಮುಂಡೇದೇ, ನಿಂಗೆ ಅವರ ಮೇಲೇ ಕೈ ಎತ್ತುವಷ್ಟು ಸೊಕ್ಕು ಬಂತನಾ? ನಿನ್ನ ಜನ್ಮಕ್ಕಷ್ಟು ಬೆಂಕಿ ಹಾಕ, ತಂದು’ ಆವೇಶಾತಿರೇಕದಿಂದ ಆಕೆ ಕಂಪಿಸುತ್ತಿದ್ದಳು. ಜನಾರ್ದನ ಧಾವಿಸಿ ಬಂದು ಎಲ್ಲರನ್ನೂ ಸಮಾಧಾನಗೊಳಿಸಲೆತ್ನಿಸಿದ.

★★★

ತದನಂತರದ ದಿನಗಳೆಲ್ಲಾ ಹಿರಿಯಣ್ಣನಿಗೆ ಅಯೋಮಯವಾದವು. ಮಕ್ಕಳ ಒಪ್ಪಿಗೆ ಪತ್ರದ ವಿನಾ ಬೇರೆಲ್ಲಾ ಕಾಗದಪತ್ರಗಳೂ ತಯಾರಾಗಿದ್ದವು. ತನ್ನದೇ ರಕ್ತ – ಮಾಂಸವನ್ನು ಹಂಚಿಕೊಂಡಿದ್ದ ಮಕ್ಕಳೇ ಇಂದು ತನ್ನನ್ನು ಹರಿದು ತಿನ್ನುವ ಸನ್ನಾಹದಲ್ಲಿರುವದನ್ನು ಕಂಡು ಆತ ದಿಗ್ಭ್ರಮೆಗೊಳಗಾಗಿದ್ದ. ಕೋಟ್ಯಧಿಪತಿಯಾಗಿ ಮೆರೆಯುವ ಕನಸು ಅದ್ಯಾವಾಗಲೋ ನುಚ್ಚುನೂರಾಗಿತ್ತು. ಊರಿನ ಜನರೆದುರು, ಸರೀಕರೆದುರು, ನೆಂಟರಿಷ್ಟರೆದುರು ಠೀವಿಯಿಂದ ಜೀವನ ಮಾಡುವ ಅವನ ರಂಗುರಂಗಿನ ಬಲೂನಿಗೆ ವಿಧಿ ಮುಳ್ಳು ಚುಚ್ಚಿತ್ತು.

ಅದೊಂದು ದಿನ ಪಕ್ಕದ್ಮನೆ ಶೇಷಾಚಾರ್ಯರಿಗೆ ಪೇಟೆಯಲ್ಲಿ ಸರ್ವೇಯರ್ ಪಳ್ಳತ್ತಾಯ ಸಿಕ್ಕಿದ್ದ. ಅವನ ಪ್ರಕಾರ, ಇದೀಗ ಮಾಳೂರು, ಕಾರಹಳ್ಳಿ ದ್ವಾರಾ ನಿರ್ಮಿಸುವ ಹೈವೇಗೆ ತುಂಬಾ ವೆಚ್ಚವಾಗುವದರಿಂದ ಅದನ್ನು ರದ್ದುಪಡಿಸಲಾಗಿದೆಯೆಂದೂ, ಅದರ ಬದಲು ಹೈವೇಯನ್ನು ಇನ್ನೊಂದು ದಿಕ್ಕಿನಲ್ಲಿ ನಿರ್ಮಿಸಲಾಗುವದೆಂದೂ ತಿಳಿಸಿದ್ದ. ಆ ಸಮಾಚಾರವನ್ನು ಶೇಷಾಚಾರ್ಯರು ಹಿರಿಯಣ್ಣನಿಗೆ ಮುಗುಮ್ಮಾಗಿ ತಿಳಿಸಿ ಒಳಗಿಂದೊಳಗೇ ಒಂಥರಾ ವಿಕೃತಾನಂದವನ್ನು ಅನುಭವಿಸಿದರು.

**ಎಸ್.ಪಿ. ಶ್ಯಾನಭಾಗ**

ಎಲ್ಐಸಿಯ ನಿವೃತ್ತ ಅಧಿಕಾರಿ. ಉತ್ತರ ಕನ್ನಡ ಜಿಲ್ಲೆಯ ಕುಮಟೆ ತಾಲ್ಲೂಕಿನ ಹರಕಡೆ ಹುಟ್ಟಿದೂರು. ಇದು ವರೆಗೆ ಸುಮಾರು 80ಕ್ಕೂ ಹೆಚ್ಚು ಕತೆ, ಪ್ರಬಂಧ, ಹಾಸ್ಯ ಬರಹಗಳು ನಾಡಿನ ವಿವಿಧ ನಿಯತಕಾಲಿಕಗಳಲ್ಲಿ ಪ್ರಕಟವಾಗಿವೆ. ಪ್ರಸ್ತುತ ಬೆಂಗಳೂರನಲ್ಲಿ ನೆಲೆಸಿದ್ದಾರೆ.